ವಾರದ ಪತ್ರ

## ದಿಟ್ಟತನ ಎಲ್ಲಿ ಹೋಯಿತು?

ಕಲರ್ಸ್ ಕನ್ನಡದ 'ಸೀತಾ ವಲ್ಲಭ' ಧಾರಾವಾಹಿಯಲ್ಲಿ ಚಿಕ್ಕಂದಿನ ಅಚ್ಚುಗುಬ್ಬಿ ಎಲ್ಲಿ, ಈಗ ಬೆಳೆದು ದೊಡ್ಡವರಾಗಿರುವ ಅಚ್ಚು ಗುಬ್ಬಿ ಎಲ್ಲಿ? ಆಗ ಗುಬ್ಬಿಗೆ ಪುಕ್ಕಲ ಅಚ್ಚುವಿನಲ್ಲಿ ಧೈರ್ಯ ತುಂಬುವುದು ದೊಡ್ಡ ಸವಾಲಾಗಿತ್ತು ಈಗ ಇನ್ನೊಬ್ಬ ನಾಯಕಿ ಅಂಕಿತಾ ಎದುರು ಬಾಲ ಮುದುರಿದ ಬೆಕ್ಕಿನಂತೆ ಯಾವಾಗಲೂ ಹ್ಯಾಪ್ ಮೋರೆ ಹಾಕಿಕೊಂಡು ಕಣ್ಣೀರು ಸುರಿಸುತ್ತಾ ಇರುವುದು ನೋಡಿದರೆ ಇವಳು ಆಗಿನ 'ಗಂಡುಬೀರಿ' ಗುಬ್ಬಿ ಅನ್ನಿಸುವುದೇ ಇಲ್ಲ. ನಗು–ನಗುತ್ತಲೇ ಅಂಕಿತಾಳ ಸವಾಲುಗಳನ್ನು ಎದುರುಸಿದರೆ ವೀಕ್ಷಕರಿಗೆ ನೋಡಲು ಚೆನ್ನ. ಅದು ಬಿಟ್ಟು ಅಳುಮುಂಜಿಯಂತೆ ಅಂಕಿತಾಳ ಪ್ಲಾನಿಗೆ ವರ್ತಿಸುವುದು ಎಷ್ಟರ ಮಟ್ಟಿಗೆ ಸರಿ ಅನ್ನುವುದು ನಿರ್ದೇಶಕರಿಗೆ ತಿಳಿಯಬೇಕು. ಬಣ್ಣ ಬದಲಾಗಿದೆ ಬಂಧ ಬಿಗಿಯಾಗಿದೆ, ಆದರೆ ಬಣ್ಣ ಕಲಸುಮೇಲೋಗರವಾಗಿದೆ.

—ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ವಿದ್ಯಾರ್ಥಿಗಳ ಬಾಂಧವ್ಯ

ಕೊರೊನಾದಿಂದಾಗಿ ಇತ್ತೀಚೆಗೆ ಡಿ.ಡಿ.ಚಂದನದಲ್ಲಿ ಪ್ರಸಾರವಾದ ಪರೀಕ್ಷಾವಾಣಿ ಕಾರ್ಯಕ್ರಮವನ್ನು ಈಗಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪುನರ್ಮನನಕ್ಕಾಗಿ ಆಯೋಜಿಸಲಾಗಿತ್ತು. ಇದರಲ್ಲಿ ಎಲ್ಲ ವಿಷಯಗಳನ್ನು ಪುನರಾವರ್ತನೆ ಮಾಡಿ ಮನದಟ್ಟು ಮಾಡಿಸಲಾಯಿತು. ಇದರ ಜೊತೆಗೆ ಮಾದರಿ ಪ್ರಶ್ನೆ ಪತ್ರಿಕೆಯನ್ನೂ ಬಿಡಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಉಪಾಯದ ಮಾರ್ಗವನ್ನು ಸೂಚಿಸಿದಂತಾಯಿತು. ಇನ್ನು ಮುಂದೆ 10ನೇ ತರಗತಿಗೆ ಹೋಗುವ ವಿದ್ಯಾರ್ಥಿಗಳಿಗೂ ಈ ಕಾರ್ಯಕ್ರಮ ಅನುಕೂಲವಾಯಿತು. ಹೇಗೆಂದರೆ ಶಿಕ್ಷಕರು ತರಗತಿಯಲ್ಲಿ ಪಾಠ ಮಾಡುವಾಗ ಚಂದನದಲ್ಲಿ ಪ್ರಸಾರವಾದ ಕಾರ್ಯಕ್ರಮದ ನೆನಪಾಗಿ ವಿಷಯ ಇನ್ನಷ್ಟು ಗಟ್ಟಿಯಾಗುತ್ತದೆ.

—ವಿನ್ಯಾಸ ಬಿ. ಬೆಂಗಳೂರು

## ಸಾಮಾಜಿಕ ಬದ್ಧತೆ ಬೇಕು

ಲಾಕ್‌ಡೌನ್ ಕಾರಣದಿಂದ ಮಾಲಾಶ್ರೀ ಅಭಿನಯದ 'ಗಂಗಾ' ಸಿನಿಮಾವನ್ನು ಟೀವಿಯಲ್ಲಿ ನೋಡಬೇಕಾಯಿತು. ಅದರಲ್ಲಿ ಒಬ್ಬ ಸಹನಟ ದುಡ್ಡಿದ್ದರೆ ವಿದ್ಯಾಭ್ಯಾಸ ಏಕೆ ಬೇಕು? ಪ್ರಿನ್ಸಿಪಾಲೇ ನನ್ನ ಕಾಲು ಬೀಳ್ತಾನೆ ಎಂದು ಡೈಲಾಗ್ ಹೊಡೆಯುತ್ತಾನೆ. ಒಬ್ಬ ಸಹನಟಿ ದುಡ್ಡಿದ್ದರೆ ದೇವರೆ ಬಂದು ನಮ್ಮನೆ ಕೆಲ್ಸಮಾಡ್ತಾನೆ ಎಂದು ಡೈಲಾಗ್ ಹೊಡೆಯುತ್ತಾಳೆ. ಏನು ಸಂಸ್ಕಾರದ ಸಂಭಾಷಣೆ ಇದು? ಜನರಿಗೆ ಯಾವ ಸಂದೇಶ ಹೋಗುತ್ತದೆ? ಸಂಭಾಷಣೆ ಬರೆದವರಿಗೆ, ನಿರ್ದೇಶನ ಮಾಡಿದವರಿಗೆ ಮತ್ತು ಸೆನ್ಸಾರ್ ಮಂಡಳಿಯವರಿಗೆ ಸ್ವಲ್ಪವಾದರೂ ಸಾಮಾಜಿಕ ಬದ್ಧತೆ ಇದೆಯಾ? ಹಿಂದೆ 'ಬಂಗಾರದ ಮನುಷ್ಯ' ನೋಡಿ ಪ್ರಭಾವಿತರಾಗಿ ಅನೇಕ ಜನ ವಿದ್ಯಾವಂತರೂ ಸಹ ಕೃಷಿ ಕ್ಷೇತ್ರಕ್ಕೆ ಕಾಲಿಟ್ಟು ಭೂಮಾತೆ ಸೇವೆ ಮಾಡಿದರು. ಸಿನಿಮಾಜಗತ್ತಿನ ಮಂದಿ ಸ್ವಲ್ಪ ಗಂಭೀರವಾಗಿ ಯೋಚಿಸಿ.

—ಕೆ. ಹೊನ್ನಪ್ಪ, ತುಮಕೂರು

## ಕೊರೊನಾ ಸ್ಕೋರ್ ಬೋರ್ಡ್‌ಗಳೇ?

ಕನ್ನಡ ನ್ಯೂಸ್ ಚಾನೆಲ್‌ಗಳು ಕೊರೊನಾ ಕೋವಿಡ್‌ನ ಸ್ಕೋರ್ ಬೋರ್ಡಗಳಾಗಿ ಪರಿವರ್ತಿತವಾಗಿದ್ದು ಒಂದು ದುರಂತ. ಕೊರೊನಾ ಸೋಂಕಿನ ಸಮಸ್ಯೆ ಆರಂಭವಾದಾಗಿನಿಂದ ನ್ಯೂಸ್ ಚಾನೆಲ್‌ಗಳು ತಮ್ಮ ಎಂದಿನ ಕಾರ್ಯಕ್ರಮಗಳನ್ನು ಬದಿಗೊತ್ತಿ ಕೊರೊನಾ ಸೋಂಕು, ಸಾವು, ಕ್ವಾರಂಟೈನ್, ಲಾಕ್ ಡೌನ್, ಸೀಲ್ ಡೌನ್ ಎಂದು ಸದಾ ಕೊರೆಯುತ್ತಿವೆ. ಇದರಲ್ಲಿ ಭಯ ಹುಟ್ಟಿಸುವ, ಹೆದರಿಸುವ ಪ್ರಹಸನಗಳೇ ಹೆಚ್ಚು ಕಾಣುತ್ತಿದ್ದು ಸಕಾರಾತ್ಮಕ ಸುದ್ದಿಗಳು, ಮಾಹಿತಿಗಳು ನೆಪಮಾತ್ರಕ್ಕೆ ಇರುತ್ತವೆ. ಸುದ್ದಿ ವಾಚಕರು ಸುದ್ದಿಗಳನ್ನು ನೀಡುವ ವೈಖರಿ, ಸುದ್ದಿ ವಾಹಿನಿಗಳನ್ನು ಕೂಗುಮಾರಿಗಳಂತೆ ಕಾಣಿಸುತ್ತಿವೆ. ಕೊರೊನಾ ಬಗ್ಗೆ ಅಜೀರ್ಣವಾಗುವಷ್ಟು ಕವರ್ ಮಾಡಿವೆ. ದಿನಕ್ಕೆ ಎರಡ್ಮೂರು ಬಾರಿ ಸಮಗ್ರವರದಿ ನೀಡಿದರೆ ಚೆನ್ನಾಗಿರುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಗಟ್ಟಿತನ ಉಳಿಸಿಕೊಂಡ ಜೊತೆ ಜೊತೆಯಲಿ

ಕೊರೊನಾ ವೈರಾಣುವಿನಿಂದಾಗಿ ಲಾಕ್‌ಡೌನ್ ಮಾಡಿದ್ದರಿಂದ ಎಲ್ಲಾ ಕಿರುತೆರೆಯ ಧಾರಾವಾಹಿಗಳು ನಿಂತುಹೋಗಿದ್ದವು. ಈಗ ಮತ್ತೆ ಚಿತ್ರೀಕರಣ, ಪ್ರಸಾರ ಆರಂಭವಾಗಿವೆ. ಆದರೆ ಕೆಲವು ಹಿಂದಿ ಧಾರಾವಾಹಿಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಸಾರಮಾಡುತ್ತಿದ್ದಾರೆ. ಇದರಿಂದ ನಮಗೆ ನೋಡಲು ಇರಿಸುಮುರುಸಾಗುತ್ತಿದೆ. ಜೊತೆಗೆ ನಮ್ಮ ಕಲಾವಿದರ ಕೆಲಸವನ್ನು ಕಿತ್ತುಕೊಂಡಂತಾಗಿದೆ ಎಂದು ಅನಿಸುತ್ತಿದೆ. ಇವೆಲ್ಲದರ ನಡುವೆಯೂ ಝೀ ಕನ್ನಡದಲ್ಲಿ ಬರುವ 'ಜೊತೆ ಜೊತೆಯಲಿ' ತುಂಬಾ ಚೆನ್ನಾಗಿ ಮೂಡಿ ಬರುತಿದೆ. ಈ ಲಾಕ್‌ಡೌನ್ ನಂತರವು ಕೂಡಾ ತನ್ನ ಗಟ್ಟಿತನವನ್ನು ಉಳಿಸಿಕೊಂಡಿದೆ.

—ವೀಣಾ ಬಿ. ಬೆಂಗಳೂರು



## ಮಹಾಭಾರತಕ್ಕೆ ನಮನಗಳು

'ಮಹಾಭಾರತ' ಧಾರಾವಾಹಿಯನ್ನು ಕನ್ನಡದಲ್ಲಿ ಪ್ರಸಾರ ಮಾಡುತ್ತಿರುವುದಕ್ಕೆ ಸ್ಟಾರ್ ಸುವರ್ಣ ವಾಹಿನಿಗೆ ಧನ್ಯವಾದಗಳು. ಮಹಾಭಾರತದ ಕತೆ ಇಂದಿನ ಅದೆಷ್ಟೋ ಯುವಜನರಿಗೆ ತಿಳಿದಿಲ್ಲ. ಮಹಾಭಾರತ ಕತೆಯನ್ನು ಪುಸ್ತಕದಲ್ಲಿ ಓದಿ ತಿಳಿದುಕೊಳ್ಳುವಷ್ಟು ಇಂದಿನವರಿಗೆ ಆಸಕ್ತಿಯೂ ಇಲ್ಲ. ಆ ಕಾರಣಕ್ಕೆ ಈ ಲಾಕ್‌ಡೌನ್ ಸಮಯದಲ್ಲಿ ಮಹಾಭಾರತ ಧಾರಾವಾಹಿ ಪ್ರಸಾರವಾಗುತ್ತಿರುವುದು ಒಂದು ರೀತಿ ವರವೇ ಸರಿ. ಮಹಾಭಾರತ ಹಾಗೂ ಕೃಷ್ಣನ ಚರಿತೆಗಳನ್ನು ತಿಳಿಸುವ 'ರಾಧಾಕೃಷ್ಣ' ಧಾರಾವಾಹಿಗಳು ಜನರನ್ನು ರಂಜಿಸುತ್ತಿವೆ. ಜೊತೆಗೆ ಪುರಾಣ ಕತೆಗಳನ್ನು ತಿಳಿಯುವಂತೆ ಮಾಡಿದೆ. ಅದರಲ್ಲೂ ಮಹಾಭಾರತದಲ್ಲಿ ಬರುವ ಪ್ರತಿ ಪಾತ್ರಕ್ಕೂ ಪಾತ್ರಧಾರಿಗಳು ಜೀವ ತುಂಬಿ ನಟಿಸಿದ್ದಾರೆ. ಅದರಲ್ಲೂ ಕೃಷ್ಣನ ಪಾತ್ರಧಾರಿಯನ್ನು ನೋಡುತ್ತಿದ್ದರೆ ಶ್ರೀಕೃಷ್ಣ ಬಂದು ಉಪದೇಶ ನೀಡಿದಂತಿರುತ್ತದೆ. ಒಟ್ಟಾರೆ ಡಬ್ಬಿಂಗ್ ಧಾರಾವಾಹಿಗಳಾದರೂ ಜನರಿಗೆ ನಮ್ಮ ಪುರಾಣ ಕತೆಗಳನ್ನು ತಿಳಿಸುತ್ತಿರುವ ಕಾರಣಕ್ಕೆ ಈ ಧಾರಾವಾಹಿಗಳು ಹೆಚ್ಚು ಇಷ್ಟವಾಗುತ್ತಿವೆ.

—ಮನಸ್ವಿ ಬೆಂಗಳೂರು